

ಮಕ್ಕಿ ಮನೆ ಮನೆತನ ಎಂದರೆ ಹೆಸರಾಂತ ಮನೆತನ. ಶ್ಯಾಮರಾಯರ ತಾತನ ಕಾಲದಿಂದ ದೊಡ್ಡ ಜಮೀನ್ದಾರರಾಗಿ ಅವರ ಕಾಲದಲ್ಲೇ ಹೆಸರು ಇದ್ದವರು. ತಂದೆ ರಾಜಾರಾಯರವರ ಜಮೀನನ್ನು ಊರ್ಜಿತಗೊಳಿಸಿ ಊರಿನ ಗಣ್ಯ ವ್ಯಕ್ತಿಯಾಗಿದ್ದವರು. ಊರಿನ ಯಾವುದೇ ಸಭೆ, ಸಮಾರಂಭಗಳಿಗೆ ಮಕ್ಕಿ ಮನೆ ಸಾಹುಕಾರ್‍ರು ಬಂದಿದ್ದರೆಂದರೆ ಅದಕ್ಕೆ ಒಂದು ಗ್ರೇಡ್ ಬಂದಂತೆ.

ರಾಜಾರಾಯರಿಗೆ ಶ್ಯಾಮ ಒಬ್ಬನೇ ಮಗ. ಹೇರಳವಾಗಿ ಕೂಡಿಟ್ಟ ಹಣ, ಆಸ್ತಿಗೆ ಒಬ್ಬನೆ ವಾರಸುದಾರ. ರಾಜಾರಾಯರು ದಾನ ಧರ್ಮವನ್ನು ಉದಾರವಾದ ಮನಸ್ಸಿಂದ ಮಾಡುತ್ತಿದ್ದರು. ಯಾರೇ ಬಂದರೂ ಬರಿ ಕೈಯಲ್ಲಿ ಹೋಗಿದ್ದಿಲ್ಲ. 70ರ ವಯಸ್ಸಿನ ತನಕ ಗಟ್ಟಿ ಮುಟ್ಟಾಗಿದ್ದು, ಶ್ಯಾಮನಿಗೆ ಒಳ್ಳೇ ಮನತನದ ಹೆಣ್ಣೂ ತಂದಿದ್ದರು. ಸರಸ್ವತಿ ಆ ಮನೆಗೆ, ತಕ್ಕ ಸೊಸೆಯಾಗಿ, ಅತ್ತೆ ವನಜಮ್ಮನಿಗೆ ಮಗಳೂ ಸೊಸೆಯೂ ಆಗಿದ್ದಳು.

ರಾಜಾರಾಯರ ನೇತೃತ್ವದಲ್ಲೇ ಮನೆಯ ವಹಿವಾಟು ನಡೆಯುತ್ತಿದ್ದರೂ ನಡೆಸಿಕೊಂಡು ಹೋಗಲು ಶ್ಯಾಮನಿಗೇ ಬಿಟ್ಟಿದ್ದರು. ಅವರ 72ನೇ ವಯಸ್ಸಲ್ಲಿ, ಯಾರಿಗೂ ಸೂಚನೆ ಕೊಡದೆ, ಹಾರ್ಟ್ ಫೇಲ್ ಆಗಿ ನಡೆದು ಬಿಟ್ಟರು.

ಮನೆಯ ಸಂಪೂರ್ಣ ಹೊಣೆ ಶ್ಯಾಮನದಾಯಿತು. ಊರಿನ ಜನ ಪ್ರಾಯದಲ್ಲಿ ಸಿಕ್ಕ ಅಧಿಕಾರ, ಹಣ ಶ್ಯಾಮನನ್ನು ಏನೂ ಮಾಡಬಹುದು, ಇನ್ನು ಮಕ್ಕಿ ಮನೆ ಮುಂಚಿನಂತೆ ಇರಲಾರದೆಂದು ಅಲ್ಲಿ ಇಲ್ಲಿ ಮಾತಾಡಿದ್ದುಂಟು. ತಂದೆಯ ನೆರಳಲ್ಲೇ ಬೆಳೆದ ಶ್ಯಾಮ ಶ್ಯಾಮರಾಯರಾಗಿ ರಾಜಾರಾಯರ ಹೆಸರಿಗೆ ಕಿಂಚಿತ್ತೂ ಕುಂದು ಬಾರದಂತೆ ತಂದೆಗೆ ತಕ್ಕ ಮಗ ಎನ್ನುವ ಹೆಸರನ್ನು ಉಳಿಸಿಕೊಂಡರು.

ಶ್ಯಾಮರಾಯರಿಗೆ ಮೂರು ಗಂಡು ಮಕ್ಕಳು. ರಾಮಚಂದ್ರ, ಶಶಿಧರ ಹಾಗೂ ಮೂರನೆಯವನಿಗೆ ತಂದೆಯ ಹೆಸರಾದ ರಾಜ ಎಂದು ಇಟ್ಟಿದ್ದರು. ಮಕ್ಕಳ ವಿದ್ಯಾಭ್ಯಾಸ ಮಕ್ಕಿ ಮನೆ ಕೊಪ್ಪ ಶಿವಮೊಗ್ಗೆಯಲ್ಲಿ ಆಗಿ, ರಾಮಚಂದ್ರ ಡಿಗ್ರಿ ಮುಗಿಸಿ ತಂದೆಯ ಆಣತಿಯಂತೆ ಮನೆಗೆ ಬಂದ, ಶಶಿಧರ ಎಲ್.ಎಲ್.ಬಿ. ಮಾಡಿ ಕೊಪ್ಪದಲ್ಲಿ ವಕೀಲನಾಗಿ ಮನೆಯಿಂದಲೇ ಹೋಗಿ ಬರುತ್ತಿದ್ದ. ರಾಜ ಓದಿನಲ್ಲಿ ಆಸಕ್ತಿ ಇಲ್ಲದೆ ಹಾಗೂ ಹೀಗೂ ಪಿಯು ತನಕ ಓದಿ ಫೇಲಾಗಿ ಬಿಟ್ಟು ಬಿಟ್ಟ. ಮತ್ತೆ ಕಟ್ಟಬೇಕೆಂಬ ಎಲ್ಲರ ಒತ್ತಾಯಕ್ಕೆ ಅವನು ಮಣಿಯಲಿಲ್ಲ.

ಮನೆಯ ಹಾಗೂ ತೋಟದ ಉಸ್ತುವಾರಿ ನೋಡಿಕೊಳ್ಳುವುದರಲ್ಲಿ ರಾಮಚಂದ್ರ ತಂದೆಗೆ ಬೆಂಬಲವಾಗಿ ನಿಂತರೆ, ಶಶಿಧರ ಇದ್ದ ಸಮಯದಲ್ಲಿ ಅಣ್ಣ, ತಂದೆಗೆ ಸಹಾಯಕನಾಗಿದ್ದ. ರಾಜ ಮಾತ್ರ ಅತ್ತ ಓದದೇ ಇತ್ತ ಮನೆಯ ಕೆಲಸಗಳಲ್ಲೂ ಆಸಕ್ತಿ ತೋರದೆ ಸಮಯ ಕಳೆಯುತ್ತಿದ್ದ.

ರಾಮಚಂದ್ರ, ಶಶಿಧರರಿಗೆ ತಮ್ಮ ಅಂತಸ್ತಿಗೆ ತಕ್ಕ ಮನೆತನದ ಹೆಣ್ಣು ತಂದು ಅದ್ದೂರಿಯಲ್ಲಿ ಮದುವೆ ಮಾಡಿದ್ದರು. ಇಡೀ ಊರಿನಲ್ಲಿ ಎಷ್ಟೋ ದಿನಗಳು, ಮಕ್ಕಿ ಮನೆ ಮದುವೆ ವೈಭವ ಊಟ ಉಡುಗೊರೆಯ ಮಾತೇ ಇತ್ತು.

ಸ್ವಂತ ಅಕ್ಕ ತಂಗಿಯರಂತೆ ರಾಮನ ಹೆಂಡತಿ ವಾಣಿ ಶಶಿಯ ಹೆಂಡತಿ ಸಂಧ್ಯಾ ಅನ್ಯೋನ್ಯವಾಗಿದ್ದು, ಇದ್ದರೆ ಅವರಂತಿರಬೇಕೆಂಬ ಹೊಗಳಿಕೆಗೆ ಪಾತ್ರರಾಗಿದ್ದರು. ಇಡೀ ಮನೆಗೆ ಕಪ್ಪು ಚುಕ್ಕೆಯಂತಿದ್ದ ರಾಜನ ವಿಷಯದಲ್ಲಿ ಶ್ಯಾಮರಾಯರು ಸೋತು ಹೋಗಿದ್ದರು. ಸಾಮ, ಭೇದ, ದಂಡಗಳ ಯಾವ ಪ್ರಯೋಗವೂ ಒಳ್ಳೆಯ ಪರಿಣಾಮ ಕೊಡದೆ ಅವರು ಕೈಚೆಲ್ಲಿ ಆಗಿತ್ತು.

ಎದುರಿಗೆ ಏನೂ ಹೇಳದಿದ್ದರೂ ಊರವರ ಬಾಯಲ್ಲಿ ರಾಜನ ಒಂದೊಂದು ಗುಣಗಳೂ ಕರ್ಣಾ ಕರ್ಣದಿಂದ ಅವರನ್ನು ತಲುಪುತ್ತಿತ್ತು. ಅವರನ್ನು ಕಂಡು ಹೊರಗೆ ತೋರಿಸಲಾಗದೆ ಒಳಗೇ ಕರುಬುವವರಿಗೆ ಸಿಹಿ ಕಜ್ಜಾಯದಂತೆ ರಾಜ ಅವರ ಬಾಯಿಗೆ ಸಿಕ್ಕುತ್ತಿದ್ದ.

ಅಣ್ಣಂದಿರೂ ಎಷ್ಟೋ ಸಾರಿ ಇವನಿಂದ ಮುಜುಗರಕ್ಕೆ ಒಳಗಾಗುತ್ತಿದ್ದರು. ಅಲ್ಲಿ ಬಿದ್ದಿದ್ದ ಎಂದೋ ಇಲ್ಲಿ ಹೊಡೆದಾಟವಾಯ್ತು ಎಂದೊ ಒಂದಲ್ಲಾ ಒಂದು ಪ್ರಸಂಗಗಳು ಅವರನ್ನು ತಲೆ ತಗ್ಗಿಸುವಂತೆ ಮಾಡಿದವು. ಆದಷ್ಟು ತಂದೆ ಕಿವಿಗೆ ಬೀಳದಂತೆ ಪ್ರಯತ್ನಿಸುತ್ತಿದ್ದರು. ಅವರೆಲ್ಲಾ ರಾಜನ ಹತ್ತಿರ ಮಾತಾನಾಡುವುದೇ ಬಿಟ್ಟಿದ್ದರು. ಅತ್ತಿಗೆಯರಂತೂ ಅವನಿದ್ದಲ್ಲಿ ಇರುತ್ತಿರಲಿಲ್ಲ. ಎಷ್ಟೋ ರಾತ್ರಿ ಮೇಲೆ ಹಿಂಬಾಗಿಲಿನಿಂದ ಮಹಡಿ ಕೋಣೆಗೆ ಹೋಗುತ್ತಿದ್ದ. ಸರಸ್ವತಿಯವರ ಹೆತ್ತ ಕರುಳು, ಕೆಲವೊಮ್ಮೆ ಕಷ್ಟ ಪಟ್ಟು ಮಹಡಿಗೆ ಹೋಗಿ ಊಟ ಕೊಡುತ್ತಿದ್ದರು. ಕಡೆ ಕಡೆಗೆ ಏಳುವುದಕ್ಕೂ ಆಗದಷ್ಟು ಕುಡಿದು ಬರುವ ಅವನನ್ನು ನೋಡಲಾಗದೆ ಹೋಗುವುದೇ ಬಿಟ್ಟಿದ್ದರು. ಎಲ್ಲಿ ತಿನ್ನುತ್ತಿದ್ದನೊ ಒಂದೂ ಗೊತ್ತಾಗುತ್ತಿರಲಿಲ್ಲ. ರಾಜನ ಚಿಂತೆ ಶ್ಯಾಮರಾಯರನ್ನು ಹಣ್ಣು ಮಾಡಿತ್ತು. ಹಾದಿಗೆ ತರುವ ಎಲ್ಲಾ ಮಾರ್ಗ ಮುಚ್ಚಿತ್ತು. ಕೆಲವು ಆಪ್ತರು ಮದುವೆ ಆದರೆ ಸರಿ ಹೋಗುತ್ತಾನೆ ಎಂದು ಸಲಹೆ ಕೊಟ್ಟರು. ಮೊದ ಮೊದಲು ಇನ್ನೊಂದು ಜೀವವನ್ನು ಯಾಕೆ ಹಾಳು ಮಾಡಲಿ ಎನ್ನುತ್ತಿದ್ದವರು, ಕಡೆಗೆ ಇದೊಂದು ಆಶಾಕಿರಣ, ಅವನು ಮದುವೆ ಆದರೆ ಸರಿ ಆಗಬಹುದು ಎನ್ನುವ ಆಸೆಯೇ ಗೆದ್ದು ಅಲ್ಲಿ ಇಲ್ಲಿ ಹೆಣ್ಣು ನೋಡ ತೊಡಗಿದ್ದರು.

ಮಕ್ಕಿ ಮನೆಗಾದರೆ ಕಣ್ಣು ಮುಚ್ಚಿ ಹೆಣ್ಣು ಕೊಡಬಹುದು ಎಂದವರೆಲ್ಲಾ ರಾಜನ ವಿಷಯದಲ್ಲಿ ಮೌನವಾದರು. ಎರಡು ದೊಡ್ಡ ಮನೆಯ ಹೆಣ್ಣು ತಂದ ಶ್ಯಾಮರಾಯರು ರಾಜನ ವಿಷಯದಲ್ಲಿ ಅಂತ ಆಸೆ ಇಡದೆ ಬಡ ಕುಟುಂಬದ ಹೆಣ್ಣುಗಳನ್ನು ವಿಚಾರಿಸುತ್ತಿದ್ದರು. ಒಂದೆರಡು ಹುಡುಗಿಯರು ಅವನನ್ನು ತಿರಸ್ಕರಿಸಿಯೂ ಆಯಿತು.

ಇಂಥ ಸಂದರ್ಭಗಳು ರಾಜನನ್ನು ಇನ್ನೂ ಅಧಃ ಪತನಕ್ಕೆ ನೂಕುತ್ತಿತ್ತು. ಸೀತಾಲಕ್ಷ್ಮಿಯಂತೂ ಅವನು ಸತ್ತರೆ ಸಾಕು ಎನ್ನುವ ಮಟ್ಟಕ್ಕೆ ಬಂದಿದ್ದರು. ಶ್ಯಾಮರಾಯರು ತಾನು ಈ ಒಂದು ಕರ್ತವ್ಯವನ್ನು ಮಾಡದೆ ಹೋಗಿಬಿಟ್ಟರೆ ಎಂದು ಕೊರಗುತ್ತಿದ್ದರು.

ಅಂತೂ ಇವರ ಕೀರ್ತಿಯನ್ನೇ ಕೇಳಿದ್ದ ಬಡ ಕುಟುಂಬದ ಸುಬ್ಬರಾಯರ ಮಗಳು ನಾಗಲಕ್ಷ್ಮಿ, ಮಕ್ಕಿ ಮನೆಯ ಮೂರನೆಯ ಸೊಸೆಯಾಗಿ ಬಂದಳು. ನಾಲ್ಕು ಹೆಣ್ಣು ಮಕ್ಕಳಲ್ಲಿ ನಾಲ್ಕನೆಯವಳು ನಾಗಲಕ್ಷ್ಮಿ, ಇದಾದರೂ ಗಂಡಾಗಿ ತಮ್ಮ ವಂಶ ಉದ್ಧಾರವಾಗುವ ಮಹತ್ ಆಕಾಂಕ್ಷೆಯಲ್ಲಿದ್ದ ತಂದೆ ತಾಯಿಗೆ ನಾಗಲಕ್ಷ್ಮಿ ಹುಟ್ಟಿದಾಗ, ಇದೊಂದು ಶನಿ ಬಾಕಿಯಿತ್ತು ಅಂತ ಅಪ್ಪ ಅಮ್ಮ ಮಾತಾಡಿದ್ದನ್ನ ದೊಡ್ಡಕ್ಕ ನೋವಿನಿಂದ ಹೇಳಿದ್ದಳು.

ತನ್ನ ತಪ್ಪಿಲ್ಲದ ಹುಟ್ಟಿನಿಂದ, ತಾಯಿ ತಂದೆಗೆ ಬೇಡವಾಗಿದ್ದ ನಾಗಲಕ್ಷ್ಮಿಗೆ ಮುಂಚೆಯಿಂದಲೂ ಹಠ ಒರಟು ಸ್ವಭಾವ. ಅಸಡ್ಡೆ ಬೈಗುಳ ಹೊಡೆತ ಮಾತ್ರ ಕಂಡಿದ್ದ ಅವಳಿಗೆ ಅಮ್ಮನ ಬೈಗುಳವಾಗಲಿ, ಹೊಡೆತವಾಗಲಿ ಅವಳು ಹಠ ಹೆಚ್ಚಾಗುತ್ತಿತ್ತೇ ಹೊರತು ಅವಳು ಬಗ್ಗುತ್ತಿರಲಿಲ್ಲ. 'ಯಾಕೆ ಹೊಟ್ಟೆ ಉರಿಸಕ್ಕೆ ಹುಟ್ಟಿದ್ಯೇ' ಅಂತ ಅಮ್ಮ ಕೂಗಾಡಿದರೆ 'ನೀನೂ ಅಪ್ಪ ಯಾಕೆ ಹುಟ್ಟಿಸಿದ್ರಿ?' ಅಂತ ಎದುರುತ್ತರ ಕೊಡುತ್ತಿದ್ದಳು. ಕೋಪ ತಡೆಯದೆ ಹೊಡೆದರೆ ಅವಳು ಅಳುತ್ತಿರಲಿಲ್ಲ.

ಮೂರು ಹೆಣ್ಣು ಮಕ್ಕಳ ಮದುವೆ ಮಾಡಿ ಹೈರಾಣವಾಗಿದ್ದ ಸುಬ್ಬರಾಯರು ಮಕ್ಕಿ ಮನೆ ಸಂಬಂಧ ಬಂದದ್ದು ವರವಾಗಿ ಖಂಡಿತ್ತು. ಅವರಿವರು ಹೇಳಿದ್ದರು, ಹುಡುಗನ ನಡತೆ ಏನೂ ಸರಿಯಿಲ್ಲ ಅಂತ. ಇಂಥ ಅವಕಾಶ ಇನ್ನೂ ಸಿಕ್ಕಲಾರದೆಂದು ನಾಗಲಕ್ಷ್ಮಿಯನ್ನು ಒಂದು ಮಾತೂ ಕೇಳದೆ ತಮ್ಮ ಒಪ್ಪಿಗೆ ಕೊಟ್ಟೇ ಬಿಟ್ಟರು.

ದೊಡ್ಡಕ್ಕ ನಾಗಲಕ್ಷ್ಮಿಗೆ ಹೇಳಿದ್ದಳು. 'ಹುಡುಗ ಸರಿಯಿಲ್ಲವಂತೆ ನಾಗೂ, ಎಲ್ಲಾ ಅಭ್ಯಾಸ ಉಂಟಂತೆ, ಅಪ್ಪಯ್ಯ ನಿನ್ನ ಮದುವೆ ಮಾಡಿ ಕೈ ತೊಳೆದುಕೊಳ್ಳಲು ನೋಡ್ತಾ ಇದಾರೆ ಕಣೇ, ನೀನು ಖಂಡಿತಾ ಒಪ್ಪಬೇಡ' ಅಂದಿದ್ದಳು. ಅಮ್ಮನಿಗಿಂತಾ ನಾಗಲಕ್ಷ್ಮಿಗೆ ಈ ಅಕ್ಕನಲ್ಲಿ ವಿಶ್ವಾಸವಿತ್ತು. ಅಕ್ಕ ಅವಳನ್ನು ಕರುಣೆಯಿಂದ ನೋಡುತ್ತಿದ್ದಳು. ಅಮ್ಮ ಹೊಡೆದಾಗ ಯಾಕೆ ನಾಗೂ ಹಠ ಮಾಡ್ತಿ ಅಂತ ಗಾಯಕ್ಕೆ ಎಣ್ಣೆ ಹಚ್ಚುತ್ತಿದ್ದಳು. ಇಂತವರಿಗೆ ಯಾಕೆ ಮಕ್ಕಳು ಅಂತ ಮರುಗುತ್ತಿದ್ದಳು.

ಅಕ್ಕ ತನ್ನ ಒಳಿತಿಗೇ ಹೇಳುವುದಂಥ ಗೊತ್ತಿದ್ದರೂ, ನಾಗಲಕ್ಷ್ಮಿ ಈ ಮದುವೆಯನ್ನು ವಿರೋಧಿಸಲಿಲ್ಲ. ಅವಳಿಗೆ ಹುಡುಗನ ಕಡೆಯವರು ಎರಡೂ ಖರ್ಚು ಹಾಕಿ ಮಾಡಿಕೊಳ್ಳುವುದಲ್ಲದೆ, ತಂದೆಗೆ ಅವರೇ ಹಣ ಕೊಡುತ್ತಾರೆ